ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂ: ಡಿಟಿಇ: ೦3:ಎಲ್‌ಆರ್‌ಡಿಸಿ:2020-21

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು -01
ದಿನಾಂಕ: 01-05-2021

"ಸುತ್ತೋಲೆ"

ವಿಷಯ : COVID -19 ಸಾಂಕ್ರಾಮಿಕ ಸೋಂಕು ತಡೆಗಟ್ಟುವ ಮುಂಜಾಗ್ರತಾ ಕ್ರಮವಾಗಿ ರಾಜ್ಯಾದ್ಯಂತ ದಿನಾಂಕ:27-04-2021 ರಿಂದ ದಿನಾಂಕ:12-05-2021ರವರೆಗೆ ನಿರ್ಬಂಧ ವಿಧಿಸರುವ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಬೋಧಕ ವೃಂದದವರು ಆನ್ ಲೈನ್ ಪ್ಲಾಟ್‌ಫಾರಂಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳಿಗೆ ತರಗತಿಗಳನ್ನು ನಡೆಸುವ ಕುರಿತು

ಉಲ್ಲೇಖ: (1). ಸರ್ಕಾರದ ಆದೇಶ ಸಂ. ಆರ್‌ಡಿ 158 ಟಿಎನ್‌ಆರ್ 2020, ದಿ:26-04-2021
(2). ಈ ಕಛೇರಿ ಸುತ್ತೋಲೆ ಸಂ:ಐಟಿಇ/01/ಇಸಿಎಸ್/(3)/2020-21, ದಿನಾಂಕ:27-04-2021

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರದ ಆದೇಶದನ್ವಯ COVID -19 ಎರಡನೇ ಅಲೆಯ ಸಾಂಕ್ರಾಮಿಕ ಸೋಂಕು ತಡೆಗಟ್ಟುವ ಮುಂಜಾಗ್ರತಾ ಕ್ರಮವಾಗಿ ರಾಜ್ಯಾದ್ಯಂತ ದಿನಾಂಕ:27-04-2021 ರಿಂದ ದಿನಾಂಕ:12-05-2021ರವರೆಗೆ ನಿರ್ಬಂಧ ವಿಧಿಸರುವ ಹಿನ್ನೆಲೆಯಲ್ಲಿ ಇಲಾಖೆಯ ಅಧೀನದಲ್ಲಿ ಬರುವ ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಬೋಧಕ ವೃಂದದವರು ಮತ್ತು ವಿದ್ಯಾರ್ಥಿಗಳು ಅವರವರ ಸ್ಥಳಗಳಲ್ಲಿಯೇ ಸುರಕ್ಷಿತವಾಗಿರುವಂತೆ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ .ಸಂಸ್ಥೆಗಳ ಬೋಧಕ ವೃಂದದವರು ವಿದ್ಯಾರ್ಥಿಗಳನ್ನು ಕ್ರಿಯಾತ್ಮಕವಾಗಿ ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಈ ಕೆಳಕಂಡ ಆನ್ ಲೈನ್ ಪ್ಲಾಟ್‌ಫಾರಂಗಳನ್ನು ಬಳಸಿಕೊಂಡು 2,4 ಮತ್ತು 6ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪಠ್ಯಕ್ರಮಗಳನ್ವಯ ತರಗತಿಗಳನ್ನು ಪರಿಣಾಮಕಾರಿಯಾಗಿ ದಿನಾಂಕ:03-05-2021 ರಿಂದಲೇ ಪ್ರಾರಂಭಿಸುವಂತೆ ಸೂಚಿಸಲಾಗಿದೆ

Zoom App, Impartus, Whatsapp,VTU's E-learning Portal,NPTEL,AICTE's SWAYAM Portal ,Google meet, webex etc.

ಬೋಧಕ ವೃಂದದವರಿಗೆ 2,4 ಮತ್ತು 6ನೇ ಸೆಮಿಸ್ಟರ್ ತರಗತಿಗಳಿಗೆ ಈಗಾಗಲೇ ಹಂಚಿಕೆ ಮಾಡಿರುವ ಪಠ್ಯ ವಿಷಯಗಳನ್ನು ಮೇಲಿನ ಯಾವುದೇ ಆನ್‌ಲೈನ್ ಪ್ಲಾಟ್ ಫಾರಂ ಮೂಲಕ ಬೋಧನೆ ಮಾಡಲು ಕ್ರಮ ವಹಿಸುವಂತೆ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ.ಸಂಬಂಧ ಪಟ್ಟ ಬೋಧಕ ವೃಂದದವರು ಪ್ರತಿ ನಿತ್ಯ ಅವರುಗಳು ಆನ್ ಲೈನ್ ಮುಖಾಂತರ ತೆಗೆದುಕೊಂಡ ತರಗತಿಗಳ ಮಾಹಿತಿಯನ್ನು **https://forms.gle/qsLwHghZ1eAM** ಲಿಂಕ್ ಮೂಲಕ ಗೂಗಲ್ ಶೀಟ್‌ನಲ್ಲಿ ನಮೂದಿಸುವುದು ಕಡ್ಡಾಯವಾಗಿರುತ್ತದೆ. ಪ್ರಾಂಶುಪಾಲರುಗಳು ಸಂಸ್ಥೆಯ ಮಟ್ಟದಲ್ಲಿ ಗೂಗಲ್ ಶೀಟ್ ವಿನ್ಯಾಸ ಮಾಡಿ, ಪ್ರತಿ ನಿತ್ಯ ಮಾಹಿತಿ ಸಂಗ್ರಹಿಸಿ ಆನ್ ಲೈನ್ ತರಗತಿಗಳು ಸಮರ್ಪಕವಾಗಿ ನಡೆಯುತ್ತಿರುವುದರ ಬಗ್ಗೆ ನಿಗಾ ವಹಿಸುವುದು. ಈ ಬಗ್ಗೆ ಕ್ರಮ ವಹಿಸಿದ ಬೋಧಕ ವೃಂದದವರ, ಫಲಾನುಭವಿಗಳಾದ ವಿದ್ಯಾರ್ಥಿಗಳ ಹಾಗೂ ಶೇಕಡಾವಾರು ಪ್ರತಿ ಬೋಧಕ ವೃಂದದವರ ಆನ್ ಲೈನ್ ತರಗತಿಗಳ ಪ್ರಗತಿ ಇತ್ಯಾದಿ ಅಂಕಿ ಅಂಶಗಳ ಸವಿವರವಾದ ವರದಿಯನ್ನು ಈ ಕಛೇರಿಗೆ ವಾರಕ್ಕೊಮ್ಮೆ ಸಲ್ಲಿಸುವಂತೆ ಸಹ ಸೂಚಿಸಲಾಗಿದೆ.

ಮುಂದುವರೆದು, ರಾಜ್ಯದ ಪಾಲಿಟೆಕ್ನಿಕ್‌ಗಳ ಬೆಸ ಸೆಮಿಸ್ಟರ್‌ಗಳ (1,3 & 5 ODD SEMESTERS ) ಬಹುತೇಕ ಪ್ರಾಯೋಗಿಕ ಪರೀಕ್ಷೆಗಳು ಪೂರ್ಣಗೊಂಡಿದ್ದು, ಹಾಗೂ ದಿನಾಂಕ:03-05-2021 ರಿಂದ ಪ್ರಾರಂಭಿಸಬೇಕಿದ್ದ 1,3

Scanned with CamScanner

ಮತ್ತು 5ನೇ ಸೆಮಿಸ್ಟರ್‌ಗಳ ಥಿಯರಿ ಪರೀಕ್ಷೆಗಳನ್ನು ಉಲ್ಲೇಖ(1)ರ ಸರ್ಕಾರದ ಆದೇಶದನ್ವಯ, ಉಲ್ಲೇಖ(2) ರ ಸುತ್ತೋಲೆಯಂತೆ ಮುಂದಿನ ಆದೇಶದವರೆಗೆ ಮುಂದೂಡಲಾಗಿದೆ. ಬಾಕಿ ಇರುವ 01, 03, 05ನೇ ಸೆಮಿಸ್ಟರ್‌ಗಳ ಪ್ರಾಯೋಗಿಕ ಪರೀಕ್ಷೆಗಳನ್ನು ಹಾಗೂ ಮುಂದೂಡಲ್ಪಟ್ಟಿರುವ ಥಿಯರಿ ಪರೀಕ್ಷೆಗಳನ್ನು ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಅವಶ್ಯವಿರುವ ಪರಿಕ್ಷಾ ಪೂರ್ವ ತಯಾರಿಗೆ ಸಮಯವನ್ನು ನೀಡಿ ನಡೆಸಲಾಗುವುದು.ಸಂಬಂಧಪಟ್ಟ ಪ್ರಾಂಶುಪಾಲರುಗಳು ಹಾಗೂ ಬೋಧಕ ವೃಂದದವರು 2,4 ಮತ್ತು 6ನೇ ಸೆಮಿಸ್ಟರ್ ಗಳ ಆನ್‌ಲೈನ್ ತರಗತಿಗಳಿಗೆ ಹಾಜರಾಗುವಂತೆ ವಿದ್ಯಾರ್ಥಿಗಳಿಗೆ ಸಾಮಾಜಿಕ ಜಾಲತಾಣಗಳಾದ ವಾಟ್ಸ್‌ಆಫ್, ಟೆಲಿಗ್ರಾಮ್ ಇತ್ಯಾದಿಗಳ ಮುಖಾಂತರ ಕೂಡಲೇ ವ್ಯಾಪಕವಾಗಿ ಪ್ರಚಾರ ನೀಡಿ ಪರಿಣಾಮಕಾರಿಯಾಗಿ ಆನ್‌ಲೈನ್ ತರಗತಿಗಳನ್ನು ನಿರ್ವಹಿಸುವಂತೆ ಸೂಚಿಸಲಾಗಿದೆ.

**"ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲದಪಟ್ಟಿದೆ"**

ಜಂಟಿ ನಿರ್ದೇಶಕರು(ಆಡಳಿತ)

ತಾಂತ್ರಿಕ ಶಿಕ್ಷಣ ಇಲಾಖೆ.

ಇವರಿಗೆ,

1. ರಾಜ್ಯದ ಎಲ್ಲಾ ಎಲ್ಲಾ ಸರ್ಕಾರಿ / ಅನುದಾನಿತ/ ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಾಂಶುಪಾಲರುಗಳಿಗೆ
2. ಮಾನ್ಯ ಆಯುಕ್ತರ ಆಪ್ತ ಶಾಖೆಗೆ ಮಾಹಿತಿಗಾಗಿ
3. ಮಾನ್ಯ ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ
4. ಎಲ್ಲಾ ಜಂಟಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ರವರುಗಳಿಗೆ ಮಾಹಿತಿಗಾಗಿ
5. ಇ- ಗವರ್ನೆನ್ಸ್ ಸಂಯೋಜಕರು – ಇಲಾಖೆಯ ವೆಬ್ ಸೈಟ್ ನಲ್ಲಿ ಪ್ರಚುರಪಡಿಸುವಂತೆ

Scanned with CamScanner